ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301
DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301
ದೂರವಾಣಿ : 08382 221170
Telephone: 08382 221170 (Fax) Email:itstaffdudckarwar@gmail.com

ನಂ. ಡಿಯುಡಿಸಿ /ವಿವ/ಕರಾವಳ ಉತ್ಸವ/2017-18 ದಿನಾಂಕ: 02-11-2017

# ಅಲ್ಪಾವಧಿ ಟೆಂಡರ್ ಪ್ರಕಟಣೆ

**ಯಾವತ್ತೂ ಫೋಟೊಗ್ರಾಫರ್‌ಗಳ ಅಸೋಸಿಯೇಶನ್ ಹಾಗೂ ಫೋಟೊ ಮತ್ತು ವಿಡಿಯೋ ಗ್ರಾಫರ್‌ಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,**

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ರವೀಂದ್ರನಾಥ ಕಡಲ ತೀರದಲ್ಲಿ ಇರುವ ಮಯೂರವರ್ಮ ವೇದಿಕೆಯಲ್ಲಿ ಮತ್ತು ಜಿಲ್ಲಾ ರಂಗಮಂದಿರದಲ್ಲಿ ಕರಾವಳಿ ಉತ್ಸವ-2017 ದಿನಾಂಕ: 08, 09, 10 ನೇ ಡಿಸೆಂಬರ್ 2017 ರಂದು ನಡೆಯಲಿರುತ್ತದೆ. ಉದ್ಘಾಟನೆ, ಸಾಂಸ್ಕೃತಿಕ ಕಾರ್ಯಕ್ರಮ, ಕ್ರೀಡಾ ಸ್ಪರ್ಧೆ, ಮೆರಾಥನ್ ಸ್ಪರ್ಧೆ, ಬೋಟ್ ಸ್ಪರ್ಧೆ, ಬೀಚ್ ವಾಲಿಬಾಲ್, ಕುಸ್ತಿ, ಕಿಚನ್ ಕ್ವೀನ್ ಇತ್ಯಾದಿ ಸ್ಪರ್ಧೆಗಳು ನಡೆಸಲು ಉದ್ದೇಶಿಸಲಾಗಿದೆ. ಮೂರು ದಿನದ ಸಂಪೂರ್ಣ ಕಾರ್ಯಕ್ರಮ ಹಾಗೂ ಚಟುವಟಿಕೆಗಳ ವಿಡಿಯೋ ಚಿತ್ರೀಕರಣ, ಸ್ಥಿರ ಚಿತ್ರೀಕರಣ ಮತ್ತು Jimmy jib ಹಾಗೂ LCD live display on screen ಇತ್ಯಾದಿ ಕೆಲಸಗಳನ್ನು ಮಾಡಿಕೊಡಲು ಈ ಕೆಳಗಿನ ಶರ್ತಿಗೆ ಒಳಪಟ್ಟು ಟೆಂಡರ ಕರೆಯಲಾಗಿರುತ್ತದೆ. ಟೆಂಡರ ಸಲ್ಲಿಸುವ ಅಂತಿಮ ದಿನಾಂಕ:14-11-2017 ರಂದು 16-00 ಗಂಟೆಯೊಳಗೆ ದರವಾರವನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಇಟ್ಟ ಟೆಂಡರ್ ಪೆಟ್ಟಿಗೆಯಲ್ಲಿ ತಮ್ಮ ದರವಾರವನ್ನು ಸಲ್ಲಿಸಬಹುದಾಗಿದೆ. ಅವಧಿ ಮೀರಿ ಬಂದ ದರವಾರಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಅಧಿಕೃತ ನಮೂನೆಯಲ್ಲಿ ಟೆಂಡರ್‌ನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರ ಇವರಿಗೆ ದೂರವಾಣಿ ಸಂಖ್ಯೆ 08382-221170 ಅಥವಾ ಮೊಬೈಲ್ ನಂ. 9448120430 ಅಥವಾ ಇ-ಮೇಲ್– itstaffdudckarwar@gmail.com ಮೂಲಕ ಸಂಪರ್ಕಿಸಬಹುದಾಗಿದೆ.

1. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 14-11-2017 ರಂದು 16-00 ಗಂಟೆ
2. ಟೆಂಡರ್ ತೆರೆಯುವ ದಿನಾಂಕ: 15-11-2017 ರಂದು 17-00 ಗಂಟೆ
3. ಮುಂಗಡ ಠೇವಣಿ ರೂ. 10,000/- (ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ ಮೂಲಕ)
2. ಕರಾವಳಿ ಉತ್ಸವ ಮುಕ್ತಾಯಗೊಂಡ ನಂತರ ಅಲ್ಬಮ್ ಮತ್ತು ಡಿವಿಡಿ ಸಲ್ಲಿಸಲು ನಿಗದಿಪಡಿಸಿದ ಅವಧಿ 15 ದಿನಗಳು

**ಶರ್ತುಗಳು :**

1) ಸ್ವೀಕೃತವಾದ ಟೆಂಡರ್‌ಗಳನ್ನು ಹಾಜರಿದ್ದ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಎದುರಿನಲ್ಲಿ ದಿನಾಂಕ: 15-11-2017 ರಂದು 17-00 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ತೆರೆಯಲಾಗುವುದು.
2) ವಿಡಿಯೋಗ್ರಾಫರ್ ಮತ್ತು ಫೋಟೊಗ್ರಾಫರ್ ಹಾಗೂ ಫೋಟೊಗ್ರಾಫರ್ ಅಸೋಸಿಯೇಶನ್ ಮೂಲಕ ಸಹ ತಮ್ಮ ದರವಾರನ್ನು ನೀಡಬಹುದಾಗಿದೆ.

3) ಈ ಹಿಂದೆ ಈ ರೀತಿ ಕಾರ್ಯಕ್ರಮ (ಜಿಲ್ಲಾ ಉತ್ಸವ ಅಥವಾ ರಾಜ್ಯಮಟ್ಟದ ಉತ್ಸವ) ಮಾಡಿದ ಕುರಿತು ದಾಖಲೆಗಳನ್ನು ಸಲ್ಲಿಸುವುದು.

4) ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕ್ರೀಡಾ ಚಟುವಟಿಕೆ ಇತ್ಯಾದಿ ಏಕಕಾಲದಲ್ಲಿ ಬೇರೆ ಬೇರೆ ಸ್ಥಳದಲ್ಲಿ ನಡೆಯುತ್ತಿರುವುದರಿಂದ ಕನಿಷ್ಠ 5 ಜನರು ವಿಡಿಯೋ ಮತ್ತು ಸ್ಥಿರ ಚಿತ್ರೀಕರಣದಲ್ಲಿ ಕೆಲಸ ನಿರ್ವಹಿಸತಕ್ಕದ್ದು.

5) LCD live display on screen ಕುರಿತು Close Camera Spot Shooting ಮತ್ತು Moving Camera Spot Shooting ಚಿತ್ರೀಕರಣ ಮಾಡಿಕೊಡತಕ್ಕದ್ದು.

6) ಮೂರು ದಿನದ ಸಂಪೂರ್ಣ ಕಾರ್ಯಕ್ರಮದ ಡಿವಿಡಿ ಹಾಗೂ ಆಯ್ದ ಭಾಗದ ಕನಿಷ್ಠ 150 ಫೋಟೋಗಳನ್ನು ಸ್ಥಿರ ಚಿತ್ರೀಕರಣದ ಅಲ್ಬಮ್ ತಯಾರಿಸಿ ಕೊಡುವುದು.

7) ಸಂಪೂರ್ಣ ದಾಖಲೆಗಳನ್ನು ನೀಡಿದ ನಂತರ ಟೆಂಡರ್‌ನಲ್ಲಿ ನಮೂದಿಸಿದ ಹಣವನ್ನು ಪಾವತಿಸಲಾಗುವುದು ಹಾಗೂ ಚಿತ್ರೀಕರಣ ದಾಖಲೆ ನೀಡಿದ ನಂತರ ಟೆಂಡರ್ ಸಂಗಡ ಕಟ್ಟಿದ ಮುಂಗಡ ಠೇವಣಿಯನ್ನು ಮರಳಿಸಲಾಗುವುದು.

8) ವಿಡಿಯೋ ಮತ್ತು ಸ್ಥಿರ ಚಿತ್ರೀಕರಣದ ಕ್ಯಾಮೆರಾದ ಭದ್ರತೆ, ವಿದ್ಯುತ್ ಸಂಪರ್ಕ ಇತ್ಯಾದಿ ವ್ಯವಸ್ಥೆಯನ್ನು ತಾವು ಸ್ವಂತ ಖರ್ಚಿನಿಂದ ಮಾಡಿಕೊಳ್ಳುವುದು.

9) ದರವಾರು ಸಂಪೂರ್ಣ ತೆರಿಗೆ ಹಾಗೂ ಕ್ಯಾಮೆರಾ ಮೆನ್‌ಗಳ ಮತ್ತು ಅವರ ಸಹಾಯಕರ ದಿನಭತ್ಯೆ ಇತ್ಯಾದಿ ಖರ್ಚುವೆಚ್ಚ ಸೇರಿರತಕ್ಕದ್ದು.

10) ಟೆಂಡರ್ ಸಂಬಂಧ ಅಧ್ಯಕ್ಷರು ಟೆಂಡರ್ ಸಮಿತಿ, ಕರಾವಳಿ ಉತ್ಸವ 2016/ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರ ನಿರ್ಣಯವು ಅಂತಿಮವಾಗಿರುತ್ತದೆ.

11) ಕರಾವಳಿ ಉತ್ಸವ – 2017 ರ ವಿವಿಧ ಸಮಿತಿಯವರು ತಿಳಿಸಿದಂತೆ ಅವರ ಚಟುವಟಿಕೆಗಳನ್ನು ಚಿತ್ರೀಕರಣ ಮಾಡತಕ್ಕದ್ದು ಹಾಗೂ ಏಕಕಾಲದಲ್ಲಿ ನಡೆಯುವ ವಿವಿಧ ಸ್ಪರ್ಧೆ / ಕಾರ್ಯಗಳಿಗೆ ಬೇಕಾಗುವ ಹೆಚ್ಚಿನ ಕ್ಯಾಮರಾ / ಮಾನವ ಶಕ್ತಿಯನ್ನು ವ್ಯವಸ್ಥೆ ಮಾಡಿಕೊಳ್ಳುವುದು. ಈ ಬಗ್ಗೆ ಹೆಚ್ಚುವರಿ ಹಣ ನೀಡಲಾಗುವುದಿಲ್ಲ.

12) ಟೆಂಡರ್‌ದಾರರು ಸಲ್ಲಿಸುವ ದರವಾರವು ಎಲ್ಲಾ ತೆರಿಗೆ ಮತ್ತು ಕರ ಸೇರಿಸಿ ನೀಡತಕ್ಕದ್ದು.

ಅಧ್ಯಕ್ಷರು ಟೆಂಡರ್ ಸಮಿತಿ, ಕರಾವಳಿ ಉತ್ಸವ – 2017 ಮತ್ತು
ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ,
ಉತ್ತರ ಕನ್ನಡ, ಕಾರವಾರ